

ಹೀಗಾಗಿ ಇದಕ್ಕೆ 'ಸದ್ದಿಲ್ಲದ ದೃಷ್ಟಿಚೋರ' ಎನ್ನಲಾಗುತ್ತದೆ.

ಗ್ಲಾಕೋಮ ಹೇಗೆ ಬರುತ್ತದೆ?

ಕಣ್ಣುಗಳ ಒಳಗೆ ಎಕ್ವಿಯಸ್ ಹ್ಯೂಮರ್ ಎಂಬ ದ್ರವವಿದ್ದು, ರಕ್ತದಲ್ಲಿಯೇ ಇರುವ ದ್ರವ ಇದಾಗಿದ್ದು ಕಣ್ಣಿನ ಮಧ್ಯಭಾಗದಲ್ಲಿ ಉತ್ಪತ್ತಿಯಾಗಿ ಕಣ್ಣಿನ ಮುಂಭಾಗಗಳಿಗೆ ಪೋಷಕಾಂಶ ಒದಗಿಸುತ್ತಾ ಕಾರ್ನಿಯಾ ಮತ್ತು ಕಂದು ಬಣ್ಣದ ನಡುವೆ ಒಂದು ಕೋನದಲ್ಲಿ ಇರುವ ಜರಡಿಯಂಥ ರಚನೆ ಮೂಲಕ ಈ ದ್ರವ ಹರಿದು ಹೋಗುತ್ತದೆ. ದ್ರವ ಹರಿದು ಹೋಗುವ ವ್ಯವಸ್ಥೆಯು ತೊಂದರೆಗೊಳಗಾಗಿದ್ದರೆ, ಕಣ್ಣುಗಳ ನರದಲ್ಲಿ ಹಾನಿಯಾಗಿದ್ದರೆ, ದುರ್ಬಲವಾಗಿದ್ದರೆ ಕಣ್ಣಿನಲ್ಲಿ ಒತ್ತಡ ಹೆಚ್ಚಾಗಿ ಕಣ್ಣಿನ ದೃಷ್ಟಿ ನರವನ್ನು ಹಾನಿ ಮಾಡುತ್ತದೆ. ಇದನ್ನೇ ಗ್ಲಾಕೋಮ ಎನ್ನಲಾಗುತ್ತದೆ.

ಕಣ್ಣಿನ ಕಾಯಿಲೆಗಳ ಮಟ್ಟಿಗೆ ಗ್ಲಾಕೋಮ ಅಂಧತ್ವ ಉಂಟು ಮಾಡುವ ಎರಡನೇ ದೊಡ್ಡ ಕಾಯಿಲೆ ಎನ್ನಬಹುದು. ಕಣ್ಣಿನ ಪೊರೆ ಅತಿ ದೊಡ್ಡ ದೃಷ್ಟಿ ಸಂಬಂಧಿ ಕಾಯಿಲೆಯಾದರೂ ಕಣ್ಣಿನ ಪೊರೆಯಿಂದ ಬರುವ ದೃಷ್ಟಿದೋಷವನ್ನು ನಿವಾರಿಸಬಹುದು. ಆದರೆ ಗ್ಲಾಕೋಮದಿಂದ ಉಂಟಾಗುವ ದೃಷ್ಟಿದೋಷವನ್ನು ಸರಿಪಡಿಸಲು ಅಸಾಧ್ಯ. ಹೀಗಾಗಿ ಆರಂಭದಲ್ಲೇ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದರಿಂದ ಶಾಶ್ವತ ಅಂಧತ್ವವನ್ನು ನಿವಾರಿಸಬಹುದು. ವಿಶ್ವ ಗ್ಲಾಕೋಮ ದಿನಾಚರಣೆ, ಸಪ್ತಾಹ ಆಚರಿಸುವ ಉದ್ದೇಶ ಗ್ಲಾಕೋಮದ ಬಗ್ಗೆ ಅರಿವು ಮೂಡಿಸುವುದೇ ಆಗಿದೆ.

ಗ್ಲಾಕೋಮಕ್ಕೆ ಕಾರಣಗಳೇನು?

'ಗ್ಲಾಕೋಮಕ್ಕೆ ನಿರ್ದಿಷ್ಟ ಕಾರಣ ಏನು ಎಂಬುದನ್ನು ಹೇಳುವುದು ಕಷ್ಟ. ಆದರೂ ಆನುವಂಶಿಕತೆ, ಕಣ್ಣಿಗೆ ಏಟು ತಗುಲಿದ್ದರೆ, ಸ್ಟೀರಾಯ್ಡ್‌ಗಳ ಅತಿಯಾದ ಬಳಕೆ, ಈಗಾಗಲೇ ಕಣ್ಣುಗಳಲ್ಲಿ ಅತಿಹೆಚ್ಚಿನ ಪವರ್ ಇರುವವರಿಗೆ, ಮಧುಮೇಹ, ಬಿಪಿ, ಥೈರಾಯ್ಡ್ ಸಮಸ್ಯೆ ಇದ್ದವರಿಗೆ ಗ್ಲಾಕೋಮ ಬರುವ ಸಾಧ್ಯತೆ ಹೆಚ್ಚು' ಎಂದು ಹೇಳುತ್ತಾರೆ ಬನ್ನೇರುಘಟ್ಟ ರಸ್ತೆಯ ನಾರಾಯಣ ನೇತ್ರಾಲಯದಲ್ಲಿ ಗ್ಲಾಕೋಮ ತಜ್ಞರಾಗಿರುವ ಡಾ. ಹರ್ಷ ರಾವ್.

ಇಷ್ಟೇ ಅಲ್ಲದೆ ತೀವ್ರತರವಾದ ತಲೆನೋವು ಇರುವವರಲ್ಲಿ, ದೃಷ್ಟಿ ಆಗಾಗ ಮಂದವಾಗುವವರಲ್ಲಿ, ರಾತ್ರಿ ನೋಡಲು ಕಷ್ಟವಾಗುವವರಲ್ಲಿ, ಟೀವಿ ನೋಡಿದ ನಂತರ ಕಣ್ಣಿನ ಸುತ್ತ ನೋವಾಗುವವರಲ್ಲಿ ಗ್ಲಾಕೋಮ ಬಂದಿರುವ ಸಾಧ್ಯತೆ ಹೆಚ್ಚು.

'ನಲವತ್ತು ವರ್ಷ ಕಳೆದ ಬಳಿಕ ಎಲ್ಲರೂ ಕಣ್ಣುಗಳ ಪರೀಕ್ಷೆ ಮಾಡಿಸಿಕೊಳ್ಳಬೇಕು. ಗ್ಲಾಕೋಮ ಬಂದಿರುವುದರ ಅರಿವು ಇಲ್ಲದೆ ಇರುವ ಕಾರಣ ಬಹಳಷ್ಟು ಮಂದಿಗೆ ಕಣ್ಣು ಹಾನಿಯಾದ ಬಳಿಕವೇ ಈ ಕಾಯಿಲೆ ಬಂದಿರುವ

> ಒಮ್ಮೆ ಗ್ಲಾಕೋಮಕ್ಕೆ ಒಳಗಾಗಿ ದೃಷ್ಟಿದೋಷ ಉಂಟಾದರೆ ಅದನ್ನು ಮತ್ತೆ ಸರಿಪಡಿಸಲು ಸಾಧ್ಯವೇ ಇಲ್ಲ. ಹೀಗಾಗಿ ಆಗಾಗ ನೇತ್ರ ಪರೀಕ್ಷೆ ಮಾಡಿಸಿಕೊಳ್ಳಬೇಕಾದುದು ಅನಿವಾರ್ಯ.
>
> **-ಡಾ. ಹರ್ಷ ರಾವ್,**
> ಗ್ಲಾಕೋಮ ತಜ್ಞ

ಬಗ್ಗೆ ಗೊತ್ತಾಗುವುದು. ಒಮ್ಮೆ ಗ್ಲಾಕೋಮಕ್ಕೆ ಒಳಗಾಗಿ ದೃಷ್ಟಿದೋಷ ಉಂಟಾದರೆ ಅದನ್ನು ಮತ್ತೆ ಸರಿಪಡಿಸಲು ಸಾಧ್ಯವೇ ಇಲ್ಲ. ಭಾಗಶಃ ಹಾನಿಯಾಗಿದ್ದರೂ ಮಧುಮೇಹ, ಥೈರಾಯ್ಡ್ ತೊಂದರೆಗಳಿಗೆ ಔಷಧಿ ತೆಗೆದುಕೊಳ್ಳುವಂತೆ ಜೀವನ ಪರ್ಯಂತ ಚಿಕಿತ್ಸೆ ಪಡೆಯುತ್ತಲೇ ಇರಬೇಕು. ಹೀಗಾಗಿ ಮುನ್ನೆಚ್ಚರಿಕೆಯೇ ಇದಕ್ಕೆ ಮದ್ದು' ಎಂದು ವಿವರಿಸುತ್ತಾರೆ ಡಾ. ಹರ್ಷ.

ಗ್ಲಾಕೋಮ ಪತ್ತೆ ಹೇಗೆ?

- ನಿಯಮಿತವಾಗಿ ಕಣ್ಣಿನ ಸಂಪೂರ್ಣ ಪರೀಕ್ಷೆಗೆ ಒಳಪಟ್ಟಲ್ಲಿ ಗ್ಲಾಕೋಮ ಕಾಯಿಲೆಯನ್ನು ಮೊದಲನೆ ಹಂತದಲ್ಲಿ ಪತ್ತೆ ಹಚ್ಚಬಹುದು.
- ಮೊದಲ ಹಂತದಲ್ಲಿ ಪತ್ತೆ ಹಚ್ಚಿದ ನಂತರ ಗ್ಲಾಕೋಮ ಇರುವ ವ್ಯಕ್ತಿಗೆ ಇನ್ನು ಕೆಲವು ಸೂಕ್ಷ್ಮ ಪರೀಕ್ಷೆ ಮಾಡಲಾಗುತ್ತದೆ. ಇದರಿಂದ ಗ್ಲಾಕೋಮ ಕಾಯಿಲೆಯನ್ನು ದೃಢೀಕರಿಸಲಾಗುತ್ತದೆ.
- ಕಣ್ಣಿನ ಒತ್ತಡದ ಮಾಪನ ಮಾಡುವುದು, ದೃಷ್ಟಿ ನರದ ಪರೀಕ್ಷೆ, ದೃಷ್ಟಿ ಸುತ್ತಳತೆ ಪರೀಕ್ಷೆ, ಕಣ್ಣಿನ ಅಕ್ಷಿಪಟಲದ ಪರೀಕ್ಷೆ, ಕಣ್ಣಿನ ಕೋನದ ಪರೀಕ್ಷೆ, ದೃಷ್ಟಿ ನರದ ಚಿತ್ರವನ್ನು ಸಮಯ ಸಮಯಕ್ಕೆ, ದಾಖಲಿಸಿ ಹೋಲಿಸಿ ನೋಡುವುದು ಇತ್ಯಾದಿಗಳ ಮೂಲಕ ಗ್ಲಾಕೋಮ ಪತ್ತೆ ಹಚ್ಚಬಹುದು.

ಯಾವ ವಯಸ್ಸಿನಲ್ಲಿ ಬರುತ್ತದೆ?

'ಇದನ್ನು ನಿಖರವಾಗಿ ಹೇಳುವುದು ಕಷ್ಟ. ಇದು ಯಾವ ವಯಸ್ಸಿನವರಲ್ಲಾದರೂ ಬರಬಹುದು. ಹುಟ್ಟಿದ ಮಕ್ಕಳಲ್ಲೂ ಬರಬಹುದು. ಕ್ರಿಕೆಟ್, ಬ್ಯಾಡ್‌ಮಿಂಟನ್ ಆಡುವಾಗ ಕಣ್ಣಿಗೆ ಪೆಟ್ಟಾದರೆ, ಸ್ಟೀರಾಯ್ಡ್‌ಗಳ ನಿರಂತರ ಬಳಕೆ ಮಾಡುವವರಲ್ಲಿ ಗ್ಲಾಕೋಮ ಬರಬಹುದು ಎಂದು ಹೇಳುವ ಈ ವೈದ್ಯರು, ಗ್ಲಾಕೋಮಕ್ಕೆ ಚಿಕಿತ್ಸೆಯಾಗಿ ಆರಂಭಿಕ ಹಂತದಲ್ಲಿ ಡ್ರಾಪ್ಸ್ ಹಾಕಿಕೊಳ್ಳಬೇಕಾಗುತ್ತದೆ. ಹಾನಿಯ ಪ್ರಮಾಣ ಹೆಚ್ಚಾಗಿದ್ದರೆ ಲೇಸರ್ ಚಿಕಿತ್ಸೆ ನೀಡಬೇಕು. ಪರಿಸ್ಥಿತಿ ಗಂಭೀರವಾಗಿದ್ದರೆ ಶಸ್ತ್ರಚಿಕಿತ್ಸೆಯೂ ಅನಿವಾರ್ಯ' ಎಂದು ಹೇಳುತ್ತಾರೆ ಡಾ. ಹರ್ಷ ರಾವ್.

ಭಾರತದಲ್ಲಿ ಅಂದಾಜು 1.2 ಕೋಟಿ ಮಂದಿ ಗ್ಲಾಕೋಮದಿಂದ ಬಳಲುತ್ತಿದ್ದಾರೆ. ಸುಮಾರು 20 ಲಕ್ಷ ಮಂದಿ ಗ್ಲಾಕೋಮದಿಂದ ಶಾಶ್ವತವಾಗಿ ದೃಷ್ಟಿ ಕಳೆದುಕೊಂಡಿದ್ದಾರೆ.

ಸೂಕ್ಷ್ಮ ಅಂಗವಾದ ಕಣ್ಣುಗಳನ್ನು ಪೊರೆಯಬೇಕಾದುದು ಬಹಳ ಮುಖ್ಯ. ಇದರ ನಿರ್ಲಕ್ಷ್ಯ ಸಲ್ಲದು. ಗ್ಲಾಕೋಮ ಬಗ್ಗೆ ಅರಿವು ಮೂಡಿಸುವುದು ಕೂಡ ಅಗತ್ಯ.